**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 94/2016** **ದಿನಾಂಕಃ 24.03.2026**

**ಸಿ ಡಬ್ಲ್ಯೂ : 1**

**ಪಿ ಡಬ್ಲ್ಯೂ : 1**

---------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಮತಿ ಅನ್ನಪೂರ್ಣಾ ಸದಾಶಿವ ಜಂಬಗಿ |
| ಗಂಡ/ ತಂದೆಯ ಹೆಸರು | ಸದಾಶಿವ |
| ವಯಸ್ಸು | ಅಂದಾಜು 65 ವರ್ಷ |
| ಉದ್ಯೋಗ | ಗೃಹಿಣಿ |
| ವಾಸಸ್ಥಳ | ಸಾಃ ಅಥಣಿ , ಸದ್ಯ ವಾಸಃ ಜಮಖಂಡಿ |

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 4 ಮತ್ತು 5 ನನ್ನ ಮಕ್ಕಳು. ಆರೋಪಿ ನನ್ನ ಅಳಿಯ .

ಸುಮಾರು 10 ವರ್ಷಗಳ ಹಿಂದೆ ಬೆಳಿಗ್ಗೆ ಸುಮಾರು 11.00 ಗಂಟೆ ಸುಮಾರಿಗೆ ನಾನು, ಚಾಸಾ 4 ಮತ್ತು 5 ರವರು ನನ್ನ ಮನೆಯಲ್ಲಿ ಇದ್ದೆವು . ಆರೋಪಿತನು ಚಾಸಾ 4 ರವರ ಗಂಡನಾಗಿದ್ದು ಅವರ ಮಧ್ಯೆ ಜಗಳವಾಗಿ ಚಾಸಾ 4 ರವರು ತವರು ಮನೆಯಲ್ಲಿಯೇ ಇದ್ದಳು. ಚಾಸಾ 4 ರವರನ್ನು ಕಳುಹಿಸಿಕೊಡು ಅಂತಾ ಆರೋಪಿತನು ನಮ್ಮ ಮನೆಗೆ ಬಂದಿದ್ದು ಆಗ ನಾನು ನೀನು ಸುಧಾರಿಸಿದರೆ ಮಾತ್ರ ನನ್ನ ಮಗಳನ್ನು ನಿನ್ನೊಂದಿಗೆ ಕಳುಹಿಸುತ್ತೇನೆ ಇಲ್ಲವಾದರೆ ಕಳುಹಿಸುವುದಿಲ್ಲ ಅಂತಾ ಅಂದಿದ್ದಕ್ಕೆ ಸಿಟ್ಟಾಗಿ ಆತನು ಒಂದು ಕಲ್ಲನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆದಿದ್ದು ನನಗೆ ರಕ್ತ ಗಾಯವಾಗಿರುತ್ತದೆ. ಆಗ ನಾನು ಪೊಲೀಸ ಠಾಣೆಗೆ ಹೋಗಿದ್ದು ಆಗ ಪೊಲೀಸರು ನನ್ನ ತಲೆಯಿಂದ ರಕ್ತ ಸೋರುತ್ತಿರುವುದನ್ನು ನೋಡಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಮನೆಗೆ ಹೋಗಿರುತ್ತೇನೆ. ನಂತರ ಸುಧಾರಿಸಿಕೊಂಡು 2 ದಿನ ಬಿಟ್ಟು ಬಂದು ಪೊಲೀಸ ಠಾಣೆಗೆ ದೂರನ್ನು ನೀಡಿರುತ್ತೇನೆ. ನಾನು ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿ ದೂರನ್ನು ಮತ್ತು ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

ಆರೋಪಿತನು ನನಗೆ ಹೊಡೆಯಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿದ್ದ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸದರಿ ಮು ಮಾ ನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಸದರಿಯವರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇರುವುದಿಲ್ಲ ಅಂತಾ ಆರೋಪಿ ಪರ ವಕೀಲರು ಹೇಳಿರುತ್ತಾರೆ.

ನಂತರ ಪೊಲೀಸರು ಮುಂಜಾನೆ 9.00 ರಿಂದ 10.00 ಗಂಟೆ ಸುಮಾರಿಗೆ ನಮ್ಮ ಮನೆಗೆ ಬಂದು ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ದಿಃ 03.11.2015 ರಂದು 12.00 ಗಂಟೆಗೆ ನನ್ನ ಅಳಿಯ ನಮ್ಮ ಮನೆಗೆ ಬಂದಿದ್ದು ಈ ಮೇಲೆ ಹೇಳಿದ ಘಟನೆ ನಡೆದಿರುತ್ತದೆ ಎಂದರೆ ಸರಿ . ಚಾಸಾ 4 ಮತ್ತು 5 ರವರು ಬಂದು ನಮ್ಮ ಜಗಳವನ್ನು ಬಿಡಿಸಿರುತ್ತಾರೆ ಎಂಬ ಸೂಚನೆಗೆ ಸಾಕ್ಷಿ ಆರೋಪಿತ ನನ್ನ ತಲೆಗೆ ಕಲ್ಲು ಹೊಡೆದು ಓಡಿ ಹೋಗಿರುತ್ತಾನೆ ಆಗ ಚಾಸಾ 4 ಮತ್ತು 5 ರವರು ಬಂದಿರುತ್ತಾರೆ ಎಂದು ಹೇಳುತ್ತಾರೆ. ನಿಪಿ 1 ನ್ನು ಸಾಕ್ಷಿಗೆ ತೋರಿಸಿ ಸದರಿ ದೂರನ್ನು ಚಾಸಾ 4 ರವರು ನಾನು ಹೇಳಿದಂತೆ ಬರೆದಿರುತ್ತಾರೆ ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರೆದು ಪೊಲೀಸರು ನಾನು ಹೇಳಿದಂತೆ ಕಚೇರಿ ಯಲ್ಲಿ ಬರೆದಿರುತ್ತಾರೆ ಎಂದು ಹೆಳುತ್ತಾರೆ. ಪಂಚನಾಮೆಯನ್ನು ದಿಃ 06.11.2015 ರಂದು 9.30 ಗಂಟೆಯಿಂದ 10.30 ಗಂಟೆವರೆಗೆ ಮಾಡಲಾಗಿರುತ್ತದೆ ಎಂದರೆ ಸರಿ . ಪಂಚನಾಮೆ ಕಾಲಕ್ಕೆ ಪೊಲೀಸರು ಮು ಮಾ 1 ನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ . ನಾನು ಅಪರಾದ ಸ್ಥಳವನ್ನು ಪೊಲಿಸರಿಗೆ ತೋರಿಸಿದ್ದು ಪೊಲೀಸರು ಸದರಿ ಸ್ಥಳದ ಪಂಚನಾಮೆ ಮಾಡಿದ ಬಗ್ಗೆ ಪೊಲೀಸರು ನನ್ನ ಪುನಃ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ .  ಕೆ ಎ ವಿ  ವಕೀಲರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ರೂ. 200/- ಖರ್ಚು ಸಹಿತ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.